# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** ದಿನಾಂಕ:03.04.2020

## ಹಣ್ಣು-ತರಕಾರಿ ಮತ್ತು ಸಾಗಾಣಿಕೆಗೆ ಅವಕಾಶ ಕಲ್ಪಿಸುವ ಕುರಿತಂತೆ ನಡೆದ ಸಭೆ:



ಕೊರೋನಾ ವೈರೆಸ್ ಸೋಂಕು ಹಿನ್ನೆಲೆ ಅತಿ ಅವಶ್ಯಕವಾಗಿರುವ ಹಣ್ಣು-ತರಕಾರಿ ಮತ್ತು ಸಾಗಾಣಿಕೆಗೆ ಅವಕಾಶ ಕಲ್ಪಿಸುವ ಕುರಿತಂತೆ ಪೂಜ್ಯ ಮಹಾಪೌರರು ರವರ ಅಧ್ಯಕ್ಷತೆಯಲ್ಲಿ ಇಂದು ಪಾಲಿಕೆ ಕೇಂದ್ರ ಕಛೇರಿ ಮಹಾಪೌರರ ಕೊಠಡಿಯಲ್ಲಿ ತೋಟಗಾರಿಕೆ ಸಚಿವರು ಶ್ರೀ ಕೆ.ಸಿ.ನಾರಾಯಣ ಗೌಡ, ಸಹಕಾರ ಸಚಿವರು ಶ್ರೀ ಎಸ್.ಟಿ.ಸೋಮಶೇಖರ್, ಕೃಷಿ ಸಚಿವರು ಶ್ರೀ ಬಿ.ಸಿ.ಪಾಟೀಲ್ ರವರ ಜೊತೆ ಸಭೆ ನಡೆಯಿತು. ಈ ವೇಳೆ ವಿಶೇಷ ಆಯುಕ್ತರು(ಆಡಳಿತ) ಶ್ರೀ ಅನ್ಬುಕುಮಾರ್, ಕೃಷಿ ಇಲಾಖೆಯ ಸರ್ಕಾರ ಕಾರ್ಯದರ್ಶಿಗಳು ಶ್ರೀ ರಾಜೇಂದ್ರ ಕುಮಾರ್ ಕಠಾರಿಯಾ, ಬೆಂಗಳೂರು ಸ್ಮಾರ್ಟ್ ಸಿಟಿ ಲಿ. ವ್ಯವಸ್ಥಾಪಕ ನಿರ್ದೇಶಕರು ಶ್ರೀ ಹೆಪ್ಸಿಬಾ ರಾಣಿ ಕೊರ್ಲಪಾಟಿ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತದ್ದರು.

**ಸಹಕಾರ ಸಚಿವರು ಶ್ರೀ ಎಸ್.ಟಿ.ಸೋಮಶೇಖರ್ ಮಾತನಾಡಿ,** ನಗರದಲ್ಲಿ ಹಣ್ಣು-ತರಕಾರಿ ಮತ್ತು ಸಾಗಾಣಿಕೆಗೆ ಯಾವುದೇ ಸಮಸ್ಯೆ ಆಗಬಾರದೆಂಬ ನಿಟ್ಟಿನಲ್ಲಿ ಇಂದು ಸಭೆ ನಡೆಸಿದ್ದು, ರೈತರು ಬೆಳೆಯುತ್ತಿರುವ ಹಣ್ಣು, ತರಕಾರಿಗಳಿಗೆ ಉತ್ತಮ ಬೆಲೆ ಸಿಗಬೇಕು ಹಾಗೂ ಗ್ರಾಹಕರ ಕೈಗೆ ಅದು ಸುಲಭವಾಗಿ ಸಿಗಬೇಕೆಂಬ ಕಾರಣಕ್ಕೆ ಹಲವು ನಿರ್ಧಾರಗಳನ್ನು ಕೈಗೊಳ್ಳಲಾಗಿದೆ. ಅದರಂತೆ ಬೆಂಗಳೂರಿನಲ್ಲಿರುವ ಅಪಾರ್ಟ್‌ಮೆಂಟ್‌ಗಳಿಗೆ ಹಾಪ್‌ಕಾಮ್ಸ್ ನಿಂದ ನೇರವಾಗಿ ಹಣ್ಣುಗಳನ್ನು ತಲುಪಿಸುವ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದ್ದು, ನಾಳೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ ಜೊತೆ ವೀಡಿಯೋ ಸಂವಾದ ನಡೆಸಿ ಸೂಕ್ತ ಕ್ರಮವಹಿಸಲಾಗವುದು ಎಂದು ತಿಳಿಸಿದರು.

ಎಲ್ಲಾ ವಾರ್ಡ್‌ಗಳಲ್ಲಿ ನಂದಿನಿ ಬೂತ್ಸ್ ಇದ್ದು, ಆ ಬೂತ್ಸ್‌ಗಳಲ್ಲಿ ಹಣ್ಣು, ತರಕಾರಿ ಮಾರಾಟ ಮಾಡಲು ಕ್ರಮವಹಿಸಲಾಗಿದ್ದು, ಈ ಬಗ್ಗೆ ಈಗಾಗಲೇ ಕೆ.ಎಂ.ಎಫ್ ಅಧ್ಯಕ್ಷರ ಜೊತೆ ಚರ್ಚಿಸಿದ್ದು, ಅದಕ್ಕೆ ಅನುಮತಿ ನೀಡುವುದಾಗಿ ತಿಳಿಸಿದ್ದಾರೆ. ಜೊತೆಗೆ ವಾರ್ಡ್‌ಗಳಲ್ಲಿರುವ ಕುಡಿಯುವ ನೀರಿನ ಘಟಕಗಳಲ್ಲಿ ಹಣ ಸಂಗ್ರಹಿಸದೆ ಉಚಿತವಾಗಿ ನೀರು ಕೊಡಲು ಚಿಂತಿಸಲಾಗಿದೆ. ಅದಲ್ಲದೆ ಕಲ್ಲಂಗಡಿ, ದ್ರಾಕ್ಷಿ, ಕರ್ಬುಜ, ಸಪೋಟ ಸೇರಿದಂತೆ ಇನ್ನಿತರೆ ಹಣ್ಣುಗಳನ್ನು ತಳ್ಳುವ ಗಾಡಿಗಳ ಮೂಲಕ ನಿಗಧಿತ ಸ್ಥಳದಲ್ಲಿ ಸಗಟು ವ್ಯಾಪಾರ ಮಾಡಲು ಅನುವು ಮಾಡಿಕೊಡಲು ನಿರ್ಧರಿಸಲಾಗಿದೆ. ರೈತರು ಬೆಳೆಯುವ ಫಸಲಿಗೆ ನಿಗದಿತ ಬೆಲೆ ಸಿಗಬೇಕು, ಯಾರಿಗೂ ಅನ್ಯಾಯ ಆಗಬಾರದೆಂಬ ಕಾರಣಕ್ಕೆ ಸರ್ಕಾರ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ಸಲುವಾಗಿ ಕೆಲವು ಎ.ಪಿ.ಎಂ.ಸಿಗಳಿಗೆ ಭೇಟಿ ನಿಡಿ ತಪಾಸಣೆ ನಡೆಸಲಾಗಿದೆ ಎಂದರು.

.

**ಸಾರ್ವಜನಿಕ ಸಂಪರ್ಕಾಧಿಕಾರಿ**